ಶ್ರೀ ವೇದಾಂತ ಹೆಬ್ಬಿಗೆ.—ಆರಮನೆಯನ್ನು ನೋಡುವುದಕ್ಕೆ, ನಮ್ಮ ದೇಶದಿಂದಲೂ ಹಾಗೂ ಹೊರ ದೇಶಗಳಿಂದಲೂ ಜನ ಬರುತ್ತಾರೆ. ಮೈಸೂರು ಕುಶಲ ಕೈಗಾರಿಕಾ ಸಾಮಾನುಗಳು ಬಹಳ ಪ್ರಸಿದ್ಧಿಯಾಗಿವೆ. ಆದರೆ, ಆರಮನೆ ಬಾಗಿಲಿನಲ್ಲಿ ಮಾರತಕ್ಕ ಸಾಮಾನುಗಳು ಸಾಮಾನ್ಯವಾಗಿ, ಮರಕ್ಕೆ ಸ್ವಲ್ಪ ಗಂಧದ ಎಣ್ಣೆ ಸವರಿ, ಬೋಟಾ ಸಾಮಾನು ಮಾರತಕ್ಕ ವ್ಯವಸ್ಥೆ ಇದೆ. ಆರಮನೆಯನ್ನು ನೋಡುವುದಕ್ಕೆ ಬರತಕ್ಕಂಥ ಪ್ರವಾಸಿಗರಿಗೆ, ಒಳ್ಳೆಯ ಕುಶಲ ಕೈಗಾರಿಕಾ ಸಾಮಾನುಗಳು ದೊರಕುವುದಕ್ಕೆ ಸರ್ಕಾರದ ವತಿಯಿಂದ ದೊರಕುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ? ಒಂದು ವೇಳೆ ಮಾಡದೇ ಹೋದರೆ ಆದಷ್ಟು ಜಾಗ್ರತೆ ಅಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಮೈಸೂರು ಕರಕುಶಲ ಕೈಗಾರಿಕಾ ನಿಗಮದ ಒಂದು ಮಳಿಗೆ ಅಲ್ಲಿದೆ ಮಾನ್ಯ ಸದಸ್ಯರು ಮತ್ತು ಇನ್ನಿತರ ಸ್ನೇಹಿತರು ಅಲ್ಲಿ ಬರತಕ್ಕಂಥ ಪ್ರವಾಸಿಗರಿಗೆ ಹೇಳಬೇಕು. ನೀವು ದಯವಿಟ್ಟು ಬೇರೆ ಸಾಮಾನುಗಳನ್ನು ಖರೀದಿ ಮಾಡಬೇಡಿ ಸರ್ಕಾರದ ಅಂಗಡಿ ಎಲ್ಲಿದೆಯೋ ಅಲ್ಲಿ ಮಾತ್ರ ಕೊಂಡುಕೊಳ್ಳಿ ಎಂದು ಹೇಳಬೇಕು.

ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು

೨೫ (೨೧(ಬಿ) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

(ಅ) ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳಿಗೆ ಸಮಪಾಲನ್ನು ನೀಡಲು ಆಂಧ್ರ ಪ್ರದೇಶ ಸರ್ಕಾರದಲ್ಲಿರುವ ಮಾದರಿಯ ಒಂದು ಶಾಸನವನ್ನು ತರಬೇಕೆಂಬ ಯಾವುದೇ ಪ್ರಸ್ತಾವವು ಸರ್ಕಾರದ ಮುಂದಿದೆಯೇ ?

(ಆ) ಇರದಿದ್ದರೆ, ಮಹಿಳೆಯರ ಹಿತರಕ್ಷಣೆಗಾಗಿ ಸರ್ಕಾರವು ಈಗಲಾದರೂ ಅಂಥದೇ ಶಾಸನವನ್ನು ತರುವುದೇ ?

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಆಹಾರ ಮತ್ತು ಮತ್ತು ನಾಗರಿಕ ಸರಬರಾಜು ಸಚಿವರು).—

(ಅ) ಹೌದು.

(ಆ) (ಎ) ಖಂಡದ ಉತ್ತರವನ್ನು ನೋಡಿದಾಗ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲಾ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಎರಡನೆಯ ಪ್ರಶ್ನೆಗೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಈ ಪ್ರಶ್ನೆಯ ಇಂಗಿತವನ್ನು ಅರಿತು ಹೇಳಿದ್ದರೆ ಹೆಚ್ಚು ನೆಟ್ಟಗಾಗುತ್ತಿತ್ತು, ತಮ್ಮ ಗಮನಕ್ಕೆ ಬಂದ ಮೇಲೂ ಈ ಕಾನೂನನ್ನು ತರುವುದಕ್ಕೆ ಏತಕ್ಕೆ ವಿಳಂಬ ಮಾಡುತ್ತಿದ್ದೀರಿ ? ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಸಮಪಾಲು ಬರುವಂತಹ ಉಪಯುಕ್ತವಾದ ಕಾನೂನು ತರುವುದು ಬಹಳ ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾಡುತ್ತೇನೆಂದು ಉತ್ತರ ಹೇಳಿದ್ದೇನೆ ಅವರ ಮನಸ್ಸಿನಲ್ಲಿರುವುದು ಬೇಗ ಮಾಡಲಿ ಎಂದು, ಆಗಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಪಾಟೀಲರು ಅವರ ಆಸ್ತಿಯನ್ನು ಅವರ ಹೆಣ್ಣು ಮಕ್ಕಳಿಗೆ ಬಿಡುತ್ತಾರೋ, ಗಂಡು ಮಕ್ಕಳಿಗೆ ಬಿಡುತ್ತಾರೋ ಗೊತ್ತಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನನಗೆ ಹೆಣ್ಣು ಮಕ್ಕಳಿಲ್ಲ, ಎಲ್ಲಾ ಹೆಣ್ಣು ಮಕ್ಕಳೂ ನನ್ನ ಅಕ್ಕ ತಂಗಿಯರು ಎಂದು ಈ ರೀತಿ ಹೇಳಿದ್ದೇನೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳಿಗೆ ಹಾರನ್‌ಗಳ ಜೋಡಣೆ.

೨೬ (೩೪೮) ಶ್ರೀ ಕೆ. ಪಂಪಸತ ಬಂಗೇರ (ಬೆಳ್ತಂಗಡಿ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—